


# ಬೆಡಗಿನ ಕೀಲು ಮುರಿದು...

■ ಸದಾಶಿವ ಸೊರಟೂರು
ಕಲೆ: ಗುರು ನಾವಳ್ಳಿ

ಅಪ್ಪನ ಕೆಮ್ಮು ಮತ್ತು ಗಡಿಯಾರದ ಮುಲುಕುವಿಕೆ ಬಿಟ್ಟರೆ ಇಡೀ ಕತ್ತಲು ಶಾಂತವಾಗಿ ನನ್ನ ಕಣ್ಣೊಳಗೆ ಕರಗತೊಡಗಿತ್ತು. ಸಮಯ ನೋಡಿದೆ. ಒಂದು ಗಂಟೆಯನ್ನು ಮೀರಿ ಆಚೆ ಹೋಗಿತ್ತು ಸಣ್ಣ ಮುಳ್ಳು. ಅಪ್ಪ ಕೆಮ್ಮುತ್ತಿದ್ದರು. ಎದ್ದು ದೀಪ ಹಾಕಿ ಅಪ್ಪನ ಬಳಿ ಹೋದೆ. ಉಚ್ಚೆ ಮಾಡಿದ್ದರು. ಒರೆಸಿ, ಹಾಸಿದ್ದ ಬಟ್ಟೆ ಬದಲಿಸಿ, ನಿಕ್ಕರು ಬೇರೆ ಹಾಕಿ ಬಂದು ಮತ್ತೆ ಚಾಪೆ ಮೇಲೆ ಮೈಚೆಲ್ಲಿದೆ. ಅವರು ಕೆಮ್ಮುತ್ತಲೇ ಇದ್ದರು.

ರಾತ್ರಿಯೇ ಬೆದರುವಂತೆ ಎರಡ್ಮೂರು ನಾಯಿಗಳು ಕಿತ್ತಾಡುವ ಸದ್ದು. ಅವಕ್ಕೇನಾಗಿದೆಯೊ? ಹೋಗಿ ಓಡಿಸಬೇಕು ಅನಿಸಿತು. ಏಳಲು ಮನಸಾಗಲಿಲ್ಲ. ಮೈಕೈ ನೋವು.